ಬಿ.ಆರ್. ಉಷಾ, ಬೆಂಗಳೂರು
ತಾಯಿ ತಂದೆ ಎರಡು ಕಣ್ಣುಗಳು. ಮಕ್ಕಳು?



ಮುನ್ನೋಟ.

ರತ್ನಾ, ಕೊರವರ
ಹಗಲುಗನಸು ಕಾಣುವಾಗ ಸುಖ; ವಾಸ್ತವಕ್ಕೆ ಬಂದಾಗ ದುಃಖ. ನಿಮ್ಮ ಸಲಹೆ?
ಕನಸಿಗೂ ಒಂದು ಸಿಲಬಸ್, ಟೈಮ್‌ಟೇಬಲ್ ಹಾಕಿಕೊಂಡುಬಿಡಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮಾನವನ ಆಶೆಗೆ ಕೊನೆ ಎಲ್ಲಿ?
ಇಲ್ಲ, ಇರಬಾರದು. ಆಶೆ ಆಕ್ಸಿಜನ್; ದುರಾಸೆ ಓಝೋನ್.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಹೂವು ಅರಳಿದರೆ ಬಾಡುತ್ತೆ. ಹೆಣ್ಣು ಅರಳಿದರೆ...?
ಗಂಡಿನ ಮನ ಅವಳ ಹಿಂದೆಯೇ ಓಡುತ್ತೆ.

ಜಯಶ್ರೀ, ಬೆಂಗಳೂರು
ಹೆಂಗಸರು ಧರಿಸುತ್ತಿದ್ದ ಪುಡಿ ಕುಂಕುಮಕ್ಕೂ, ಅಂಟಿಸಿಕೊಳ್ಳುವ ಬಿಂದಿಗೂ ಏನು ವ್ಯತ್ಯಾಸ?



ಪುಡಿ ಕುಂಕುಮ ನೀಡಿದ ದಾಂಪತ್ಯದ ಅಂಟು ಅಂಟಿರುವ ಬಿಂದಿಯಲ್ಲಿಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು
ಗಣಿಗೂ, ಗಣಿತಕ್ಕೂ ಏನು ಸಂಬಂಧ?
ಎರಡೂ ಕಡೆ 'ಅದಿರು' ಇರುತ್ತದೆ.

ರಾಜಶೇಖರ ಹಾದಿಮನಿ, ಧಾರವಾಡ
ನಮ್ಮದು ಪ್ರಜಾಪ್ರಭುತ್ವದ ದೇಶವಾದರೂ ಪ್ರಜೆಗಳು ನಿಜಕ್ಕೂ ಪ್ರಭುಗಳಲ್ಲ ಅಲ್ಲವೇ ರಾಮ್‌ಜಿ?
ನಿಜ. Demo ಹಂತದಲ್ಲೇ Crazy ಆಗಿಬಿಟ್ಟಿದೆ ನಮ್ಮ ಡೆಮಾಕ್ರೆಸಿ.

ಸುನೀಲ್‌ಕುಮಾರ್ ಅಲ್ಲವಗೋಳ, ವಿಜಯಪುರ
ಪ್ರಸಿದ್ಧ ನಟಿಯರೇಕೆ ಎರಡನೆಯ ಹೆಂಡತಿಯಾಗಲು ಬಯಸುತ್ತಾರೆ?
ಒಂದು ರೌಂಡ್ ಪಳಗಿರುವ ಪ್ರಾಣಿಯನ್ನು ಮತ್ತಷ್ಟು ಪಳಗಿಸುವುದು ಸುಲಭ.

ನಾಗರಾಜ್ ಮಾದೇಗೌಡ, ಕನಕಪುರ
ಕೆನೆಗೂ ಕೆನ್ನೆಗೂ ಏನೋ ಸಾಮ್ಯತೆ ಇದೆ ಎನ್ನಿಸುತ್ತಿದೆಯಲ್ಲಾ...?
ಎರಡನ್ನೂ ಹಿಡಿಯಲು ಬಳಸುವುದು ತೋರ್ಬೆರಳು–ಹೆಬ್ಬೆರಳ ಕಾಂಬಿನೇಷನ್ನೇ.

ಮಲ್ಲನಗೌಡ ಪಾಟೀಲ, ಊರಿಲ್ಲ
ಮನೆಯಲ್ಲಿರುವ ವೈಫ್‌ಪೂ, ಕತ್ರೀನಾ ಕೈಫ್‌ಗೂ ಏನು ವ್ಯತ್ಯಾಸ?
ಕತ್ರೀನಾ 'ಟೈಗರ್ ಝಿಂದಾ ಹೈ' ಎನ್ನುವಳು. ವೈಫ್ ಹಸ್ಬೆಂಡನ್ನು ನೋಡುತ್ತಾ 'ಏಕ್ ಥಾ ಟೈಗರ್' ಎನ್ನುತ್ತಾಳೆ.

ಮಹಾವೀರ ಕಾಸರ, ಶಿವಮೊಗ್ಗ
ತಲೆ ಕೆಟ್ಟರೆ ನಾನು ಮನುಷ್ಯನೇ ಅಲ್ಲ ಎಂದು ಹೇಳುವುದರ ಅರ್ಥ?
ತಲೆ ಕೆಟ್ಟ ತಕ್ಷಣ ಪಶುವೈದ್ಯರಲ್ಲಿಯೇ ಕರೆದೊಯ್ಯಿರಿ ಎಂಬ ಸೂಚನೆ.

ಪಿ. ಶಂಕರಪ್ಪ, ಶಿವಮೊಗ್ಗ
ಕೊರೊನಾದಲ್ಲೂ ಕಾಸು ಮಾಡುವವರನ್ನು ಏನೆಂದು ಕರೆಯಬಹುದು?
ಥೂ ಕೀಳುಮೃಗ ಎಂದು ಹದ್ದುಗಿಡುಗಗಳು ದೂರ ಸರಿದವಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ನಾಯಿಗೆ ಇರುವ ಬುದ್ಧಿ ಮನುಷ್ಯನಲ್ಲಿ ಏಕಿಲ್ಲ ಸಾರ್?
ಕಚ್ಚುವುದು ಬೊಗಳುವುದು ಹೇರಳವಾಗಿದೆಯಲ್ಲ...

ರತ್ನಾ ರಾಜ್‌ಕುಮಾರ್, ಹಾಸನ
ಓದುತ್ತಾ ಓದುತ್ತಾ ನನ್ನ ಅಸ್ತಿತ್ವವೇ ಮರೆತುಹೋಗುತ್ತಿದೆಯಲ್ಲ, ಯಾಕೆ ಗುರೂಜಿ?
ಗುಡ್. ಸ್ವಜ್ಞಾನಕ್ಕಿಂತ ಸುಜ್ಞಾನ ಮುಖ್ಯ ಎಂಬ ಅರಿವು ಮೂಡಿದೆ.

## ಬಹುಮಾನಿತ ಪ್ರಶ್ನೆ

ಜೆ.ಆರ್. ಆದಿನಾರಾಯಣಮುನಿ
ತಲೆ ಬ್ರಹ್ಮಸ್ಥಾನ. ಆದರೂ ಜನ ಪಾದಗಳನ್ನೇಕೆ ಪೂಜೆ ಮಾಡುತ್ತಾರೆ?
ಮನುಜನೂ ಮರದಂತೆಯೇ; ಕೆಳಗೆ ನೀರೆರೆದರೆ ಮೇಲೆ ಫಲ ಕೊಡುವುದಯ್ಯ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ತಾಯಿಗಿಂತಲೂ ದೊಡ್ಡ ದೇವರು ಯಾರು?
ಹಸಿವು.

ಕೇಶವಪ್ರಭು, ಶಿವಮೊಗ್ಗ
ದಂಪತಿಯರಿಗೆ ಸೋಷಿಯಲ್ ಡಿಸ್ಟೆನ್ಸ್ ಕಡ್ಡಾಯಗೊಳಿಸಿದರೆ ಜನಸಂಖ್ಯಾ ಸ್ಫೋಟ ನಿಯಂತ್ರಣವಾಗುವುದಲ್ಲವೆ?
ಊಹೂಂ. ಕಡ್ಡಾಯಗೊಳಿಸಿದ್ದನ್ನೆಲ್ಲ ಗಾಳಿಗೆ ತೂರುವುದೇ ನಮ್ಮವರ ಹೆಗ್ಗಳಿಕೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಆಂಬುಲೆನ್ಸ್ ಸೈರನ್‌ಗೂ, ಹೆಣ್ಣಿನ ಕಣ್ಣೀರಿಗೂ ಏನು ವ್ಯತ್ಯಾಸ?



ಒಂದು ವೇಗ ಸೂಚಕ; ಇನ್ನೊಂದು ಆವೇಗ ಸೂಚಕ.

ಜಿ. ಪ್ರದೀಪ್‌ಕುಮಾರ್, ಹೂವಿನಹಡಗಲಿ
ಅಂದಿನ ಕವಿಗಳಿಗೆ ಸೂರ್ಯ, ಚಂದ್ರ, ಪ್ರಕೃತಿ, ಸ್ತ್ರೀ ಸೌಂದರ್ಯ ವಿಷಯ ವಸ್ತುಗಳು. ಇಂದಿನವರಿಗೆ?
ಮಣ್ಣು, ಮಣ್ಣಿನ ಮಕ್ಕಳು, ಮಾಲಿನ್ಯ, ಅಬ್ಬರ, ಉಬ್ಬರ, ಗೊಬ್ಬರ...

ರತ್ನಜ, ಮೈಸೂರು
ಅನಾಹುತ ಮಾಡುವ ಚಂಡಮಾರುತಕ್ಕೆ ಹೆಸರು ಇಡುವುದೇಕೆ?
ದೂರು ದಾಖಲಿಸಲು ಅಪರಾಧಿಯ ಚಹರೆ, ಹೆಸರು ಇರಲೇಬೇಕಂತೆ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in